## ॥ ಈಶ ನಿನ್ನ ಚರಣ ಭಜನೆ ॥

ಈಶ ನಿನ್ನ ಚರಣ ಭಜನೆ ಆಶೆಯಿಂದ ಮಾಡು ವೆನು
ದೋಷರಾಶಿ ನಾಶಮಾಡು ಶ್ರೀಶ ಕೇಶವ ॥

ಶರಣು ಹೊಕ್ಕೆನಯ್ಯ ಎನ್ನ ಮರಣ ಸಮಯದಲ್ಲಿ ನಿನ್ನ
ಚರಣ ಸ್ಮರಣೆ ಕರುಣಿಸಯ್ಯ ನಾರಾಯಣ ॥

ಶೋಧಿಸೆನ್ನ ಭವದ ಕಲುಷ ಭೋದಿಸಯ್ಯ ಜ್ಞಾನವೆನಗೆ
ಬಾಧಿಸುವ ಯಮನ ಬಾಧೆ ಬಿಡಿಸು ಮಾಧವಾ ॥

ಹಿಂದನೇಕ ಯೋನಿಗಳಲಿ ಬಂದು ಬಂದು ನೊಂದೆ ನಾನು ।
ಇಂದು ಭವದ ಬಂಧ ಬಿಡಿಸು ತಂದೆ ಗೋವಿಂದಾ ॥

ಭ್ರಷ್ಟನೆನಿಸ ಬೇಡ ಕೃಷ್ಣ ಇಷ್ಟು ಮಾತ್ರ ಬೇಡಿಕೊಂಬೆ ।
ಶಿಷ್ಟರೊಡನೆ ಇಷ್ಟು ಕಷ್ಟ ಬಿಡಿಸು ವಿಷ್ಣುವೇ ॥

ಮದನನಯ್ಯ ನಿನ್ನ ಮಹಿಮೆ ವದನದಲ್ಲಿ ನುಡಿಯುವಂತೆ ।
ಹೃದಯದೊಳಗೆ ಹುದುಗಿಸಯ್ಯ ಮಧುಸೂದನಾ ॥

ಕವಿದುಕೊಂಡು ಇರುವ ಪಾಪ ಸವಿದು ಪೋಗುವಂತೆ ಮಾಡೊ ।
ಜವನ ಬಾಧೆಯನ್ನು ಬಿಡಿಸು ತ್ರಿವಿಕ್ರಮಾ ॥

ಕಾಮಜನಕ ನಿನ್ನ ನಾಮ ಪ್ರೇಮದಿಂದ ಪಾಡುವಂಥ ।
ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನ ॥

ಮೊದಲು ನಿನ್ನ ಪಾದ ಪೂಜೆ ಒದಗುವಂತೆ ಮಾಡೋ ಎನ್ನ ।
ಹೃದಯದೊಳಗೆ ಸದನ ಮಾಡೋ ಮುದದಿ ಶ್ರೀಧರ ॥

ಹುಸಿಯನಾಡಿ ಹೊಟ್ಟೆ ಹೊರೆವ ವಿಷಯದಲ್ಲಿ ರಸಿಕನೆಂದು ।
ಹುಸಿಗೆ ಹಾಕದಿರಯ್ಯ ಹೃಷೀಕೇಶನೆ ॥

ಬಿದ್ದು ಭವದನೇಕ ಜನುಮ ಬದ್ಧನಾಗಿ ಕಲುಶದಿಂದ ।
ಗೆದ್ದುಪೋಪ ಬುದ್ಧಿ ತೋರೊ ಪದ್ಮನಾಭನೆ ॥

ಕಾಮ ಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆಯೊಳಗೆ ನುಡಿಸೊ ।
ಶ್ರೀ ಮಹಾನುಭಾವನಾದ ದಾಮೋದರ ॥

ಪಂಕಜಾಕ್ಷ ನೀನು ಎನ್ನ ಮಂಕು ಬುದ್ಧಿಯನ್ನು ಬಿಡಿಸಿ ।
ಕಿಂಕರನ್ನ ಮಾಡಿಕೊಳ್ಳೊ ಸಂಕರ್ಷಣ ॥

ಏಸು ಜನುಮ ಬಂದರೇನು ದಾಸನಲ್ಲ ವೇನೊ ನಾನು ।
ಘಾಸಿ ಮಾಡದಿರು ಎನ್ನ ವಾಸುದೇವನೇ ॥

ಬುದ್ಧಿ ಶೂನ್ಯನಾಗಿ ಎನ್ನ ಬದ್ಧ ಕಾರ್ಯ ಕುಹಕಮನವ ।
ತಿದ್ದಿ ಹೃದಯ ಶುದ್ಧಿ ಮಾಡೊ ಪ್ರದ್ಯುಮ್ನನೇ ॥

ಜನನಿಜನಕ ನೀನೆ ಎಂದು ನೆನೆವೆನಯ್ಯ ದೀನ ಬಂಧು ।
ಎನಗೆ ಮುಕ್ತಿ ಪಾಲಿಸಿಂದು ಅನಿರುದ್ಧನೇ ॥

ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು ಕ್ಷೇಮ ।
ಇರಿಸು ಚರಣದಲ್ಲಿ ಪುರುಷೋತ್ತಮ ॥

ಸಾಧುಸಂಗ ಕೊಟ್ಟು ನಿನ್ನ ಪಾದಭಜನೆಯಿಟ್ಟು ಎನ್ನ ।
ಭೇದಮಾಡಿ ನೋಡದಿರೋ ಶ್ರೀ ಅಧೋಕ್ಷಜ ॥

ಚಾರು ಚರಣ ತೋರಿ ಎನಗೆ ಪಾರುಗಾಣಿಸಯ್ಯ ಕೊನೆಗೆ ।
ಭಾರ ಹಾಕಿರುವೆ ನಿನಗೆ ನಾರಸಿಂಹನೆ ॥

ಸಂಚಿತಾರ್ಥ ಪಾಪಗಳು ಕಿಂಚಿತಾದ ಪೀಡೆಗಳು ।
ಮುಂಚಿತಾಗೆ ಕಳೆಯು ಬೇಕೊ ಸ್ವಾಮಿ ಅಚ್ಯುತಾ ॥

ಜ್ಞಾನ ಭಕುತಿ ಕೊಟ್ಟು ನಿನ್ನ ಧ್ಯಾನದಲ್ಲಿ ಇಟ್ಟು ಸದಾ ।
ಹೀನ ಬುದ್ಧಿ ಬಿಡಿಸು ಮುನ್ನ ಶ್ರೀ ಜನಾರ್ದನ ॥

ಜಪತಪಾನುಷ್ಠಾನ ಇಲ್ಲ ಕುಪಥಗಾಮಿಯಾದ ಎನ್ನ ।
ಕೃಪೆಯುಮಾಡಿ ಕ್ಷಮಿಸಬೇಕೊ ಹೇ ಉಪೇಂದ್ರನೇ ॥

ಮೊರೆಯ ಇಡುವೆನಯ್ಯ ನಿನಗೆ ಶರಧಿ ಶಯನ ಶುಭಮತಿಯ ।
ಇರಿಸು ಭಕ್ತರೊಳಗೆ ಪರಮಪುರುಷ ಶ್ರೀ ಹರೇ ॥

ಪುಟ್ಟಿಸಲೇಬೇಡ ಇನ್ನು ಪುಟ್ಟಿಸಿದಕೆ ಪಾಲಿಸೆನ್ನ ।
ಇಷ್ಟು ಮಾತ್ರ ಬೇಡಿಕೊಂಬೆ ಶ್ರೀ ಕೃಷ್ಣನೇ ॥

ಸತ್ಯವಾದ ನಾಮಗಳನು ನಿತ್ಯದಲ್ಲಿ ಪಠಿಸುವರಿಗೆ ।
ಅರ್ಥಿಯಿಂದ ಸಲಹುತಿರುವ ಕರ್ತೃ ಕೇಶವ ॥

ಮರೆಯದಲೆ ಹರಿಯನಾಮ ಬರೆದು ಓದಿ ಕೇಳಿದವಗೆ
ಕರೆದು ಮುಕ್ತಿ ಕೊಡುವ ನೆಲೆಯಾದಿಕೇಶವ ॥